ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ದಿನಾಂಕ : DATE 23/3/2020

# ಇಂದಿನಿಂದ ಸಂಸತ್ತಿನ ಕಲಾಪವೂ ಬಂದ್?: ಟಿಎಂಸಿ ಸಂಸದರು ಗೈರು

**ನವದೆಹಲಿ:** ಹಲವು ಸಂಸದರೂ ಕೊರೋನಾಗೆ ತುತ್ತಾಗುವ ಭೀತಿ ಎದುರಿಸುತ್ತಿರುವ ಬೆನ್ನಲ್ಲೇ ಸಂಸತ್ತಿನ ಬಜೆಟ್ ಅಧಿವೇಶನವನ್ನು ಮೊಟಕುಗೊಳಿಸುವ ಸಾಧ್ಯತೆ ಇದೆ ಎನ್ನಲಾಗಿದೆ. ಮಾ.31ರ ನಂತರ ಆರಂಭವಾಗಲಿರುವ ಹೊಸ ಆರ್ಥಿಕ ವರ್ಷದ ವೇತನ ಪಾವತಿ ಸಲುವಾಗಿ ಕೇಂದ್ರ ಸೋಮವಾರ ಮಧ್ಯಾಹ್ನ 2 ಗಂಟೆಗೆ ನಿಗದಿಯಾದ ಕಲಾಪದಲ್ಲಿ ಹಣಕಾಸು ಮಸೂದೆ ಮಂಡಿಸಲು ಉದ್ದೇಶಿಸಿದೆ. ಈ ಮಸೂದೆ ಅಂಗೀಕರಿಸಿ ಅಧಿವೇಶನ ಮುಂದೂಡುವ ಸಾಧ್ಯತೆ ಇದೆ. ಈಗಾಗಲೇ ಹಲವು ವಿಪಕ್ಷಗಳು ಅಧಿವೇಶನ ಮೊಟಕು ಮಾಡುವಂತೆ ಆಗ್ರಹಿಸಿವೆ. ಮತ್ತೊಂದೆಡೆ ಟಿಎಂಸಿ ಸಂಸದರು ಕೊರೋನಾ ಕಾರಣಕ್ಕೆ ಸೋಮವಾರದಿಂದ ಕಲಾಪಕ್ಕೆ ಗೈರಾಗಲು ನಿರ್ಧರಿಸಿದ್ದಾರೆ.